**ಒ.ಎಸ್.ನಂ. 359-13**

**ಪಿ. ಡಬ್ಲೂ-2**

**ದಿನಾಂಕಃ 19.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ಪ್ರತಿವಾದಿ ಪರ ಶ್ರೀ ಎ ಜಿ ಪಿ ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ದಲ್ಲಿ ಇರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಇರುವ ವಿಚಾರಗಳು ತಿಳಿದಿರುತ್ತವೆ. ನಾನು ಮುಖ್ಯ ಕಾರ್ಯದರ್ಶಿ ಮತ್ತು ಮಳೆಯೂರು RFO ವಿರುದ್ಧ ದಾವೆ ಸಲ್ಲಿಸಿರುತ್ತೇನೆ. ನಮ್ಮ ಜಮೀನು ಅರಣ್ಯಕ್ಕೆ ಒತ್ತುವರಿ ಆಗಿದ್ದರಿಂದ ದಾವೆ ಸಲ್ಲಿಸಿರುತ್ತೇನೆ. ಸರ್ವೇ 42/30 ರಲ್ಲಿ ಒಟ್ಟು ಸುಮಾರು 200 ಎಕರೆ ಇರಬಹುದು. ಸರ್ವೇ ನಂ 42 ರಲ್ಲಿ ಒಟ್ಟು 238 ಎಕರೆ ಇದ್ದು ಅದು ಮಳೆಯೂರು ಅರಣ್ಯ ಪ್ರದೇಶಕ್ಕೆ ಸೇರಿರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಪುಟ್ಟಸಿಂಗೇಗೌಡ ರವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಪುಟ್ಟಸಿಂಗೇಗೌಡರಿಗೆ ಸದರಿ ಸ್ವತ್ತು ಸರ್ಕಾರದಿಂದ ಮಂಜೂರು ಆಗಿರುತ್ತದೆ. ಸರ್ಕಾರದಿಂದ ಮಂಜೂರು ಆದ ಸ್ವತ್ತನ್ನು ಪರಬಾರೆ ಮಾಡಬಾರದು ಎಂದು ಕಾನೂನು ಇದೆ ಎಂದರೆ ಗೊತ್ತಿಲ್ಲ. ನಿಪಿ 6 ರ ಮೂಲ ಪತ್ರ ಹಾಜರುಪಡಿಸಿಲ್ಲ ಎಂದರೆ ಬ್ಯಾಂಕಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮೂಲ ಪತ್ರವನ್ನು ಬ್ಯಾಂಕಿಗೆ ಕೊಟ್ಟಿರುತ್ತೇನೆ ಎಂದು ನಾನು ದಾವಾ ಪತ್ರದಲ್ಲಿ ಬರೆಸಿಲ್ಲ, ಆ ರೀತಿ ಬರೆಸಲು ತೊಂದರೆ ಇರಲಿಲ್ಲ. ದಾವಾ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ಅರಣ್ಯ, ಪಶ್ಚಿಮಕ್ಕೆ ತೆಲಗು ಮಸಹಳ್ಳಿ ಗಡಿ, ಉತ್ತರಕ್ಕೆ ಗುರುಮಲ್ಲಪ್ಪ, ದಕ್ಷಿಣಕ್ಕೆ ಅರಣ್ಯ ಪ್ರದೇಶ. ದಾವಾ ಪತ್ರದಲ್ಲಿ ದಾವಾ ಸ್ವತ್ತಿನ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಸರ್ವೇ ನಂ 42 ಎಂದು ಬರೆಸಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನ 4 ದಿಕ್ಕಿನಲ್ಲಿ ಅರಣ್ಯ ಎಂದು ಹೇಳಿಲ್ಲ ಎಂದರೆ ಸರಿ. ಮುಂದುವರೆದು ಸರ್ವೇ 42 ಅರಣ್ಯ ಎಂದು ನುಡಿಯುತ್ತಾರೆ.

ನಿಪಿ 1 ರ ದಾಖಲೆಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವ ವರ್ಷ ಕ್ರಯಕ್ಕೆ ಪಡೆದಿರುತ್ತಾರೆ ಎಂದು ಗೊತ್ತಿಲ್ಲ. 1971 ರಲ್ಲಿ ನಮ್ಮ ತಂದೆ ಕ್ರಯಕ್ಕೆ ಪಡೆದಿರುತ್ತಾರೆ ಎಂದು ದಾವಾ ಪತ್ರದಲ್ಲಿ ಹೇಳಿದ್ದು ನಿಪಿ 3 ರ 1973-74 ನೇ ಸಾಲಿನಲ್ಲಿ ಯಾರ ಹೆಸರಿನಲ್ಲಿಯೂ ಪಹಣಿ ನಮೂದು ಇಲ್ಲ

ಎಂದರೆ ಗೊತ್ತಿಲ್ಲ. ನಿಪಿ 5 ಯಾವ ಸರ್ವೇ ನಂ ಗೆ ಕಂದಾಯ ಪಾವತಿಸಿದ ದಾಖಲೆ ಎಂದರೆ ಸರ್ವೇ ನಂ 42/30 ಎಂದು ನುಡಿಯುತ್ತಾರೆ. ನಾನು ಸುಮಾರು 50 ವರ್ಷದಿಂದ ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದೇವೆ. 2012 ರಲ್ಲಿ ಮಾತ್ರ ಅಂದರೆ ದಾವೆ ಸಲ್ಲಿಸುವ ಪೂರ್ವದಲ್ಲಿ ಮಾತ್ರ ಕಂದಾಯ ಪಾವತಿಸುತ್ತೇವೆ ಎಂದರೆ ಸರಿ. 1971 ರಿಂದ 2012 ವರೆಗೂ ಕಂದಾಯ ರಶೀದಿಗಳನ್ನು ಹಾಜರುಪಡಿಸಿಲ್ಲ ಎಂದರೆ ಬ್ಯಾಂಕಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಬ್ಯಾಂಕಿಗೆ ಕೊಟ್ಟಿರುತ್ತೇನೆ ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ. ನಾವು ಯಾವ ಸರ್ವೇ ನಂ ಗೆ ಕಂದಾಯ ಮಾಡುತ್ತೇವೆ ಎಂದು ನಾವು ಹೇಳಿ ಬರೆಸುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ ಯಾವ ಸರ್ವೇ ನಂ ಕಂದಾಯ ಪಾವತಿಸುತ್ತೇವೊ ಅದರ ರಶೀದಿ ಮಾತ್ರ ಕೊಡುತ್ತಾರೆ ಎಂದರೆ ಸರಿ.

ನಿಪಿ 5 ರಲ್ಲಿ ಸರ್ವೇ ನಂ 40/1, 40/2, 42/14, 42/16, 42/17, 42/18 ಮತ್ತು 42/30 ಎಂದು ಇದೆ ಎಂದರೆ ಸರಿ. ಗುರುಮಲ್ಲಪ್ಪ ನನ್ನ ದೊಡ್ಡಪ್ಪ. ಸದರಿ ಅವರು OS 78/2000 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ಸರ್ವೇ ನಂ 42/30 ರ ಮೇಲೆ ಸಲ್ಲಿಸಿರುತ್ತಾರೆ. ಸದರಿ ಗುರುಮಲ್ಲಪ್ಪ ರವರು ಸರ್ವೇ 42/22 ಕ್ಕೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ನಿಪಿ 7 ರ ದಾವಾ ಸ್ವತ್ತಿಗೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಸರ್ವೇ ನಂ 42/22 ನಮ್ಮ ಜಮೀನಿನ ಉತ್ತರಕ್ಕೆ ಬರುತ್ತದೆ. ನಿಪಿ 7 ರ ದಾವೆಯ ಚೆಕ್ಕು ಬಂದಿ ಪೂರ್ವಕ್ಕೆ ಸರ್ವೇ ನಂ 42, ಪಶ್ಚಿಮಕ್ಕೆ ತೆಲಗು ಮಸಳ್ಳಿ ಗಡಿ, ಉತ್ತರಕ್ಕೆ ಕರಿಗೌಡರ ಜಮೀನು ಮತ್ತು ದಕ್ಷಿಣಕ್ಕೆ ನನ್ನ ತಂದೆ ಜಮೀನು ಎಂದು ಇದೆ ಎಂದರೆ ಸರಿ. ಸದರಿ ಸ್ವತ್ತಿನ 4 ದಿಕ್ಕುಗಳಿಗೂ ಅರಣ್ಯ ಇದೆ ಎಂದು ತೋರಿಸಿಲ್ಲ ಎಂದರೆ ಸರಿ. ಪ್ರತಿವಾದಿಗಳ ವಿರುದ್ಧ ದಾವೆ ಸಲ್ಲಿಸಲು ಮುಂಚಿತವಾಗಿ ನೋಟಿಸ್ ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ನೋಟಿಸ್ ನ್ನು ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ.

**<u>ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**